# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ: 138

**21-06-2021** ರಂದು ಸೊಮವಾರ ಬೆಳಿಗ್ಗೆ **12.30** ಘಂಟೆಗೆ ವಾರ್ಡ್ ಸಂಖ್ಯೆ: **138** ಛಲವಾಧಿ ಪಾಳ್ಯ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ ಕೆ. ಬಿ ತಾರಾನಾಥ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ಕಾಟನ್ ಪೇಟೆ, ಉಪವಿಭಾಗ) ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ **138** ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: **10-09-2020**ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು. ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಅಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಬಿ ತಾರಾನಾಥ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಮೀಟಿಯ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಡೆಬ್ರಿಸ್ ಕಂಡು ಬರುತ್ತಿರುವ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಅಧ್ಯಕ್ಷರು ಕಾಮಗಾರಿ ಇಲಾಖೆಯವರಿಗೆ ಇದರ ಬಗ್ಗೆ ವಿವರಣೆಯನ್ನು ಕೋರಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಕಲ್ಲು ಮಣ್ಣುಗಳನ್ನು ಸಾರ್ವಜನಿಕರು ಹಾಕದಂತೆ ತಡೆಯುತ್ತಿದ್ದು ಹಾಗೂ 2021-22ನೇ ಸಾಲಿನಲ್ಲಿ ಒಂದು ಟ್ರಾಕ್ಟರ್ ಮತ್ತು 10 ಜನ ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಂಡು ಡೆಬ್ರಿಸ್ ತೆರವುಗೊಳಿಸಲು ಹೊಸದಾಗಿ ಟೆಂಡರ್ ಕರೆಯಲು ಅನುಮೋದನೆ ದೊರೆತ್ತಿದ್ದು, ಟೆಂಡರ್ ಕರೆದು ಕಾರ್ಯದೇಶ ನೀಡುವ ಕಾರ್ಯವು ಪ್ರಗತಿಯಲ್ಲಿರುವುದನ್ನು ಸಭೆಗೆ ತಿಳಿಸಿದರು.

ಕಮೀಟಿಯ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ನಿರ್ವಹಣೆಯ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಅಧ್ಯಕ್ಷರು ಕಾಮಗಾರಿ ಇಲಾಖೆಯವರಿಗೆ ಇದರ ಬಗ್ಗೆ ವಿವರಣೆಯನ್ನು ಕೋರಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಟ್ಟಡದ ನಿರ್ವಹಣೆಯನ್ನು ಈ ಮೊದಲು ನಿರ್ವಹಣೆ ಮಾಡುತ್ತಿದ್ದು, ಮಾನ್ಯ ಆಯುಕ್ತರ ಆದೇಶದಂತೆ ಹೊಸದಾಗಿ ಟೆಂಡರ್ ಕರೆಯಲು ಸೂಚಿಸಿದ್ದು ಅದರಂತೆ ಟೆಂಡರ್ ಕರೆದು ಕಾರ್ಯದೇಶ ನೀಡುವ ಕಾರ್ಯವು ಪ್ರಗತಿಯಲ್ಲಿರುವುದನ್ನು ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಕೋವಿಡ್ ಸೊಂಕಿತರ ಬಗ್ಗೆ ತೆಗೆದುಕೊಂಡು ನಿರ್ಣಯಗಳ ಬಗ್ಗೆ ಸಭೆಯಲ್ಲಿ ವಿವರಣೆ ನೀಡುವಂತೆ ಕೋರಿದರು

ಆರೋಗ್ಯ ಪರಿವೀಕ್ಷಕರು ವಾಡ್-138 ಮತ್ತು ಕಂದಾಯ ಪರಿವೀಕ್ಷರು ವಾರ್ಡ್-138 ರವರು ಛಲವಾಧಿ ಪಾಳ್ಯ ' ವ್ಯಾಪ್ತಿಗೆ TRIAGE ಬಿ.ಬಿ.ಎಂ.ಪಿ ರೆಫರಲ್ ಅಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರ ಅಂಜಿನಪ್ಪ ಗಾರ್ಡ್ನನ್ ಬೆಂಗಳೂರು-53 ರಲ್ಲಿ ಕೋವಿಡ್ ಅಸ್ಪತ್ರೆ ಮತ್ತು TRIAGE ಕೇಂದ್ರ ಸ್ಥಾಪನೆಯಾಗಿದ್ದು ಸದರಿ ಕೇಂದ್ರ ದಲ್ಲಿ ಆರೈಕೆ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಕಂದಾಯ ಪರಿವೀಕ್ಷಕರು ಅಂಜಜನಪ್ಪ ಗಾರ್ಡ್ನನ್, ಪೊಲೀಸ್ ಚೌಕಿಯಲಿ ವಾರ್ಡ್ 138 ವಾರ್ ರೂಮ್ ಸ್ಥಾಪಿಸಲಾಗಿದ್ದು ಸಾರ್ವಜನಿಕರು ಸದರಿ ವಾರ್ ರೂಮಿನ ಉಪಯೋಗ ಪಡೆಯುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಕಂದಾಯ ಇಲಾಖೆಯವರಿಗೆ ತಮ್ಮ ಪರಿವೀಕ್ಷಣೆಯಲ್ಲಿ ಭೂತ್ ಮಟ್ಟದ ಅಧಿಕಾರಿಗಳಿಂದ ಎರಡನೇ ಹಂತದ ಕರೋನದ ಬಗ್ಗೆ ಜನರಲ್ಲಿ ಜಾಗೃತಿ ನೀಡಲು ಮತ್ತು ಕರೋನ ಕಂಡುಬಂದಲ್ಲಿ ಮೊದಲನೇ ಹಂತ ಮತ್ತು ಎರಡನೇ ಹಂತದ ಸಂಪರ್ಕಿತರನ್ನು ಗುರ್ತಿಸುತ್ತಿರು ಬಗ್ಗೆ ಸಭೆಯಲ್ಲಿ ತಿಳಿಸಿದರು

ಕಂದಾಯ ಅಧಿಕಾರಿಗಳು ಸುಮಾರು 15 ದಿನಗಳಿಂದ ಸೋಂಕಿತರ ಸಂಖ್ಯೆ ಕಡಿಮೆಯಾಗಿರುವುದಾಗಿ ತಿಳಿಸಿದರು ಸದರಿ ರವರನ್ನು ಗುರ್ತಿಸಿ ವೈದ್ಯಾಧಿಕಾರಿಗಳು ಮತ್ತು ವೈದ್ಯಾರು ನೀಡಿದ ಸಲಹೆಯಂತೆ TRIAGE ಕೇಂದ್ರ, ಹೊಮ್ ಐಸೋಲೇಷನ್ ಮತ್ತು ಅಸ್ಪತ್ರೆಗಳಿಗೆ ಸೋಂಕಿತರನ್ನು ದಾಖಲಾತಿ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿ ನಿಧಿಯು ವಾರ್ಡ್ 138ರ ವ್ಯಾಪ್ತಿಗೆ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 18-45 ವರ್ಷ ವಯಸ್ಸಿನವರಿಗೆ ಲಸಿಕೆ ವಿತರಣೆಯಾಗುತ್ತಿದ್ದು ಹಾಗೂ 45 ವರ್ಷ ಮೇಲ್ಪಟ್ಟ ಸರ್ಕಾರದ ನಿಯಾಮನುಸಾರ ಎರಡನೇ ಮತ್ತು ಮೊದಲನೇ ಡೊಸ್ ಲಸಿಕೆಯನ್ನು ನೀಡುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು: ಬಿಡಬ್ಲೂಎಸ್ಎಸ್‌ಬಿ ಕಛೇರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಬಂದ ದೂರಿನ ಪುಸ್ತಕವನ್ನು ಪರಿಶೀಲಿಸಿದರು ಸಾರ್ವಜನಿಕರಿಗೆ ಹೆಚ್ಚಿನ ಕುಡಿಯುವ ನೀರಿನ ಅವಶ್ಯಕವಾಗಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸೂಚಿಸಿದರು.

ಬಿಡಬ್ಲೂಎಸ್ಎಸ್‌ಬಿ ಆಧಿಕಾರಿಗಳು ವಾರ್ಡ್ 138 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡುವುದಾಗಿ ತಿಳಿಸಿದರು..

ಅಧ್ಯಕ್ಷರು ಬೆಸ್ಕಂ ಕಛೇರಿಗೆ ವಾರ್ಡ್ 138 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು

ಬೆಸ್ಕಂ ಅಧಿಕಾರಿಗಳು ದೂರು ಪುಸ್ತಕವನ್ನು ಪರಿಶೀಲನೆಗೆ ನೀಡಿ ದರು ಹಾಗೂ ದೂರುಗಳನ್ನು ಬಗೆಹರಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ನೋಡಲ್ ಅಧಿಕಾರಿಗಳು ಕಾಮಗಾರಿಗೆ ಸಂಬಂಧಿಸಿದ ದೂರುಗಳು ಮತ್ತು ದೂರನ್ನು ನಿವಾರಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಕಾರ್ಯದಶಿಗಳು ಮತ್ತು ಸಹಾಯಕ ಅಭಿಯಂತರರು, ಕರೋನ ಸೋಂಕಿನಿಂದ ಸಾರ್ವಜನಿಕರು ವಾರ್ಡ್- ಕಛೇರಿಗೆ ಭೇಟಿ ಮಾಡಿ ದೂರುಗಳನ್ನು ನೀಡುತ್ತಿಲ್ಲ, ಆದರೆ ಬಿ.ಬಿ.ಎಂ.ಪಿ ಸಹಾಯ-2.0 ದಲ್ಲಿ ವಾರ್ಡ್‌ಗೆ ಸಂಬಂಧಿಸಿದಂತೆ ದೂರುಗಳನ್ನು ದಾಖಲಿಸಿದ್ದು, ಸದರಿ ದೂರುಗಳನ್ನು ಅಧ್ಯಾತೆ ಮೇರೆಗೆ ಪರಿಹರಿಸಲಾಗಿರುವುದನ್ನು ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಸಭೆಯಲ್ಲಿ ವಿವರಣೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -136ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿ ಪುಸ್ತಕವನ್ನು ಸಭೆಯಲ್ಲಿ ನೀಡಿದರು ಹಾಗೂ ಇತ್ತಿಚಿಗೆ ಬಂದ ದೂರುಗಳ ವಿವರ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

ಹಾಜರಿದ್ದ ವಾರ್ಡ್ ಕಮೀಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮೀತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಶ್ರೀ ಕೆ. ಬಿ ತಾರಾನಾಥ್.<br>ಸಹಾಯಕ ಕಾರ್ಯಪಾಲಕ ಅಭಿಯಂತರರು( ಕಾಟನ್ ಪೇಟೆ, ಉಪವಿಭಾಗ)ದೂ.9110223764 | ಅಧ್ಯಕ್ಷರು ಮತ್ತು ವಾರ್ಡ್‌ನ ನೂಡಲ್ ಅಧಿಕಾರಿ | [signature] |
| 2 | ಶ್ರೀ ಗಿರಿಧರ್,<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 137, ಬಿ.ಬಿ.ಎಂ.ಪಿ, ದೂ. 8618436036 | ಸದಸ್ಯ ಕಾರ್ಯದರ್ಶಿ | [signature] |
| 3 | ಗೀತಾ ಹೆಚ್, ದೂ. 9986537126<br>ಕಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ -137 | ಸದಸ್ಯರು | [signature] |

| | | | |
|---|---|---|---|
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ ದೂ. 9342582372 ಶ್ರೀ ಬಾಬು (ಕೆಲಸ ಪರಿವೀಕ್ಷಕರು) | ಸದಸ್ಯರು | |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ದೂ. 9845563157 | ಸದಸ್ಯರು | |
| 6 | ಶ್ರೀ ಮೊಹಮದ್ ಸಾಧೀಕ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ ನಂ. 9945373444 | ಸದಸ್ಯರು | |
| 7 | ಶ್ರೀ ಮುಸ್ತಕ್ ಶರೀಫ್ ದೂ. 9880960040 ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ | ಸದಸ್ಯರು | |
| 8 | ಶ್ರೀ ಶಿವಯ್ಯ (ಆರ್.ಐ) 9480685303 ಕಂದಾಯ ಪರಿವೀಕ್ಷಕರು | ಸದಸ್ಯರು | |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ ಗೀತಾ ಹೆಚ್, ದೂ. 9986537126 | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ ( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ | ಸದಸ್ಯರು | |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು , (ಬೇಸ್ಕಂ)ರವರ ಪ್ರತಿನಿಧಿ | ಸದಸ್ಯರು | |

ಸಹಾಯಕ ಇಂಜಿನಿಯರ್ (
ಕಾ & ಪಾ ಘಟಕ-8,
ಬೆ.ವಿ.ಕಂ., ಪಶ್ಚಿಮ 3ನೇ ಉಪ-ವಿಭ
ಗೋರಿಪಾಳ್ಯ, ಬೆಂಗಳೂರು-5600

**ಕಾರ್ಯದರ್ಶಿಗಳು**
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 138
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು
**ಹಾಗೂ ನೋಡಲ್ ಅಧಿಕಾರಿ**
**ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 138**

ಪ್ರತಿಯನ್ನು

1. ಜಂಟಿ ಆಯುಕ್ತರು ಪಶ್ಚಿಮ ರಚರ ಅವಗಾಹನೆಗೆ ಸಲ್ಲಿಸಿದೆ,
2. ಮುಖ್ಯ ಅಭಿಯಂತರರು ಪಶ್ಚಿಮ ರವರ ಮಾಹಿತಿಗೆ ಸಲ್ಲಿಸಿದೆ,
3. ಕಛೇರಿ ಕಡತಕ್ಕೆ